## ದಾಹ ತಣಿಸುವವರು

ತಮ್ಮ ಮನೆಯ ಎದುರು ಯಾವ ವಾಹನವೂ ನಿಲ್ಲಬಾರದೆಂದು ತಮ್ಮ ಗೇಟಿಗೆ 'ನೋ ಪಾರ್ಕಿಂಗ್' ಫಲಕ ನೇತು ಹಾಕಿರುವವರನ್ನು ಎಲ್ಲೆಡೆ ನೋಡಿರುತ್ತೇವೆ. ಅಪರಿಚಿತರು ಇಣುಕಿ ನೋಡದಂತೆ 'ನಾಯಿ ಇದೆ ಎಚ್ಚರಿಕೆ' ಎಂಬ ಫಲಕ ಪ್ರದರ್ಶಿಸಿದವರನ್ನೂ ಕಂಡಿರುತ್ತೇವೆ. ಅಕ್ಕಪಕ್ಕದ ಮನೆಯವರೊಂದಿಗೆ ಇಂಚಿಂಚೂ ಜಾಗಕ್ಕಾಗಿ ಅಥವಾ ಕಸದ ವಿಚಾರವಾಗಿ ಬಡಿದಾಡುವವರನ್ನೂ ಬೀದಿಗಳಲ್ಲಿ ನೋಡಿದ್ದೇವೆ. ಇಂತಹವರ ನಡುವೆ ಸಜ್ಜನರೂ ಇರುತ್ತಾರೆ. ಸಾರ್ವಜನಿಕರ ದಾಹ ತಣಿಸುವುದಕ್ಕಾಗಿ ತಮ್ಮ ಮನೆಯ ಕಾಂಪೌಂಡಿಗೆ ಹೊಂದಿಕೊಂಡಂತೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿ ಉದಾರತೆ ಮೆರೆದಿದ್ದಾರೆ ಇವರು.

ಈ ಮನೆ ಇರುವುದು ಮೈಸೂರಿನ ಕೃಷ್ಣಮೂರ್ತಿಪುರಂ ಬಡಾವಣೆಯ ರಾಮ ಅಯ್ಯರ್ ರಸ್ತೆ ಮತ್ತು ಶಾರದಾ ವಿಲಾಸ ರಸ್ತೆಯ ಸಂಗಮದಲ್ಲಿ. ಮನೆಯ ಹೆಸರು 'ಗೀತಾ' ಎಂಬ ಮನೆಯ ಮಾಲೀಕರು ತಮ್ಮ ಮನೆಯ ಕಾಂಪೌಂಡಿಗೆ ಹೊಂದಿಕೊಂಡಂತೆ ಸಾರ್ವಜನಿಕರಿಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿದ್ದಾರೆ. ಈ ಮನೆಯ ಬಳಿ ಶಾರದಾ ವಿಲಾಸ ಶಿಕ್ಷಣ ಸಂಸ್ಥೆ, ಭಗಿನಿ ಸೇವಾ ಸಮಾಜ/ವಿದ್ಯೋದಯ ಸಂಸ್ಥೆ, ಶ್ರೀ ರಾಘವೇಂದ್ರ ಸ್ವಾಮಿ ಮಠ, ಆಸ್ಪತ್ರೆ, ನರ್ಸಿಂಗ್ ಹೋಂಗಳಿವೆ. ಈ ಭಾಗದಲ್ಲಿ ಓಡಾಡುವ ವಿದ್ಯಾರ್ಥಿಗಳು, ರೋಗಿಗಳು, ಭಕ್ತರು, ಆಟೊ ಚಾಲಕರು ಹಾಗೂ ಸಾರ್ವಜನಿಕರು ಈ ಮನೆಯವರು ಕಲ್ಪಿಸಿರುವ ನೀರಿನ ವ್ಯವಸ್ಥೆಯಿಂದ ತಮ್ಮ ದಾಹ ತಣಿಸಿಕೊಳ್ಳುತ್ತಿದ್ದಾರೆ. ಸಾಂಸ್ಕೃತಿಕ ನಗರಿ ಮೈಸೂರಿಗೆ ಹೆಮ್ಮೆ ತರುವ ವಿಚಾರವಿದು.

**–ಪಿ.ಜೆ. ರಾಘವೇಂದ್ರ, ಮೈಸೂರು**





## ಕಲೆಗೆ ಭತ್ತದ ಮೆರಗು

ಚಿತ್ರದಲ್ಲಿ ಕಾಣುವ ಗಣಪತಿ ವಿಗ್ರಹವು ಆಕರ್ಷಕವೂ ಕಲಾತ್ಮಕವೂ ಆಗಿದ್ದು ಒಡಿಶಾದ ಪುರಿ ಜಗನ್ನಾಥ ಮಂದಿರ ಪರಿಸರದಲ್ಲಿ ಕಾಣಸಿಕ್ಕಿತು. ಅಲ್ಲಿನ ಅಂಗಡಿಯೊಂದರಲ್ಲಿ ಇತರ ಪ್ರತಿಮೆಗಳ ಜೊತೆಗೆ ಇದನ್ನೂ ಮಾರಾಟಕ್ಕಿರಿಸಿದ್ದರು. ಮೊದಲ ನೋಟಕ್ಕೆ ಮರದ ಕೆತ್ತನೆಯಂತೆ ಗೋಚರಿಸುತ್ತದೆ. ಆದರೆ ಸೂಕ್ಷ್ಮವಾಗಿ ಗಮನಿಸಿದಾಗ ಭತ್ತದ ಕಾಳುಗಳನ್ನು ಉಪಯೋಗಿಸಿ ತಯಾರಿಸಿದ ಕಲಾಕೃತಿಯೆಂದು ಮನದಟ್ಟಾಗುತ್ತದೆ. ಗಂಧಸಾಲೆ ಜಾತಿಯ ಗಟ್ಟಿ ಉದ್ದ ಭತ್ತದ ಕಾಳುಗಳನ್ನು ಕೆಂಪು ನೂಲಿನ ಕುಸುರಿಯೊಂದಿಗೆ ನೇಯ್ದಿರುವ ನೈಪುಣ್ಯ ನಿಚ್ಚಳವಾಗುತ್ತದೆ. ಕಣ್ಣುಗಳ ಭಾಗವನ್ನು ಮಾತ್ರ ಬಿಳಿಹಾಳೆಯ ಹಿನ್ನೆಲೆಯಲ್ಲಿ ಅಗಲ ವ್ಯಾಸದ ಕಪ್ಪು ಬಿಂದಿಯಿರಿಸಿ ಜೋಡಿಸಲಾಗಿದೆ.

ಸುಮಾರು ಮುಕ್ಕಾಲು ಅಡಿ ಎತ್ತರದ ಪ್ರತಿಮೆಯಲ್ಲಿ ಒಂದು ಸಾವಿರಕ್ಕೂ ಮಿಕ್ಕಿದ ಸಂಖ್ಯೆಯಲ್ಲಿ ಭತ್ತದ ಕಾಳುಗಳ ಬಳಕೆಯಾಗಿದೆ. ತಲೆಯ ಹಿನ್ನೆಲೆಯಲ್ಲಿರುವ ಕಿರೀಟ ಮತ್ತು ಕಿವಿಗಳ ಭಾಗವನ್ನು ಕೆಂಪು ನೂಲಿನಿಂದಲೇ ಹೆಣೆದಿದ್ದರೂ ಅವುಗಳ ಹೊರ ಅಂಚು ಮತ್ತು ಇತರ ಅಂಗ ಭಾಗಗಳಲ್ಲಿ ಮಲ್ಲಿಗೆ ಮೊಗ್ಗುಗಳಂತೆ ಭತ್ತದ ಕಾಳುಗಳನ್ನು ಜೋಡಿಸಿ ವಿಶಿಷ್ಟವೆನಿಸುವ ಗಣಪತಿ ವಿಗ್ರಹ ರಚಿಸಲಾಗಿದೆ. ಇತರ ಯಾವುದೇ ಸಾಮಗ್ರಿಗಳನ್ನು ಬಳಸದೆ ಮೂರ್ತರೂಪ ನೀಡಿ ಕಲೆಯನ್ನು ಭಕ್ತಿಯ ಜೊತೆ ಸಂಯೋಜಿಸಲಾಗಿದೆ.

**–ರಮಣ್ ಶೆಟ್ಟಿ ರೆಂಜಾಳ, ಮುಂಬೈ**